೧೯೮೭ನೇ ಇಸವಿಯ ಕರ್ನಾಟಕ ವಿಧಾನಮಂಡಲದ ಸಂಬಳ, ನಿವೃತ್ತಿವೇತನ ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳು, ನಗರಾಭಿವೃದ್ಧಿ ಮತ್ತು ಆಹಾರ ಸಚಿವರು) —ಮಾನ್ಯ ಅಧ್ಯಕ್ಷರೇ, ೧೯೮೭ನೇ ಇಸವಿಯ ಕರ್ನಾಟಕ ವಿಧಾನ ಮಂಡಲದ ಸಂಬಳ, ನಿವೃತ್ತಿವೇತನ ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವನೆಯನ್ನು ಮಂಡಿಸಲಾಯಿತು

೫–೩೦ ಪಿ.ಎಂ;

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳು, ನಗರಾಭಿವೃದ್ಧಿ, ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು) — ಸನ್ಮಾನ್ಯ ಅಧ್ಯಕ್ಷರೇ, ಈ ವಿಧೇಯಕದ ಬಗ್ಗೆ ಹೆಚ್ಚಿನ ಪ್ರಸ್ತಾಪ ಅನಾವಶ್ಯಕ ಎಂದೂ ನಾನು ಭಾವಿಸಿದ್ದೇನೆ. ಶಾಸಕ ಶ್ರೀಸಾಮಾನ್ಯನ ಪ್ರತಿನಿಧಿ. ಈ ಪ್ರತಿನಿಧಿಯು ಮುಖ್ಯಾಂಶರ ಪ್ರಜಾಪ್ರಭುತ್ವ ನಡೆಯಂತಕ್ಕಂಥ ಏರ್ಪಾಡನ್ನು ನಾವು ಹಾಕಿಕೊಂಡಿದ್ದೇವೆ. ಈ ದಿನ ಶಾಸಕನಾದವನು, ದಿನಕ್ಕೆ ೨೪ ಗಂಟೆಗಳ ಕಾಲವೂ, ವರ್ಷಕ್ಕೆ ೩೬೫ ದಿವಸಗಳೂ ಕೆಲಸ ಮಾಡಬೇಕಾದಂಥ ಸನ್ನಿವೇಶದಲ್ಲಿ ಇದ್ದಾನೆ. ಶಾಸಕ, ಒಬ್ಬ ಸಾಮಾನ್ಯ ಮನುಷ್ಯನಾಗಿರಬಹುದು, ವಕೀಲನಾಗಿರಬಹುದು, ವ್ಯಾಪಾರಸ್ಥನಾಗಿರಬಹುದು, ಡಾಕ್ಟರ್ ಆಗಿರಬಹುದು, ಯಾರೇ ಆಗಿರಲಿ ಒಂದು ಸಲ ಶಾಸಕನಾದರೆ ಅವನು ತನ್ನ ಇತರ ಎಲ್ಲಾ ಕೆಲಸಗಳನ್ನೂ ಬಿಟ್ಟು ಒಂದೇ ಮನಸ್ಸಿನಿಂದ ಸಾರ್ವಜನಿಕರ ಕೆಲಸಗಳನ್ನು ಮಾಡಬೇಕಾದ ಪರಿಸ್ಥಿತಿ ಈ ದಿನ ಇದೆ. ಒಂದನ್ನೊಂದು ಸಮಯದಲ್ಲಿ ವಕೀಲರು ಈ ಮನೆಯ ಸದಸ್ಯರಾಗಿರುತ್ತಿದ್ದರು, ಶಾಸಕರಾಗಿರುತ್ತಿದ್ದರು. ಶಾಸನಸಭೆ ನಡೆದಾಗ ದೊಡ್ಡ ದೊಡ್ಡ ಭಾಷಣಗಳನ್ನು, ಪಾಂಡಿತ್ಯ ಪೂರ್ಣವಾದ ಭಾಷಣಗಳನ್ನು ಮಾಡಿ, ಪುನಃ ಅವರು ತಮ್ಮ ವೃತ್ತಿಗೆ ಹಿಂದಿರುತ್ತಿದ್ದರು. ಈ ಮಧ್ಯೆ ಅವರಿಗೆ ತೊಂದರೆ ಇರುತ್ತಿರಲಿಲ್ಲ. ಈ ದಿನ ಆ ಪರಿಸ್ಥಿತಿಹೋಗಿದೆ ದಿನದ ೨೪ ಗಂಟೆಗಳ ಕಾಲ ದುಡಿದರೂ, ಸಾರ್ವಜನಿಕರ ಪರವಾಗಿ ಕೆಲಸ ಮಾಡಲು ಸಮಯ ಸಾಲದೇ ಹೋಗುತ್ತದೆ. ಶಾಸಕನಾಗಿ, ಶಾಸಕತನಕ್ಕೆ ಸಂಬಂಧಪಡದಿರತಕ್ಕಂಥ ನೂರಾರು ವಿಷಯಗಳನ್ನು ಜನರು ಶಾಸಕನ ಹತ್ತಿರ ಅವನಿಂದ ಪರಿಹಾರವನ್ನು ಬೇಡುತ್ತಾರೆ. ಶಾಸಕ ಸಾಮಾನ್ಯನಾದರೂ, ಅಸಾಮಾನ್ಯ ಶಕ್ತಿಯನ್ನು, ಸಾಮಾನ್ಯ ಜನರು ಅವನಲ್ಲಿ ಕಂಡು, ಅವನ ಹತ್ತಿರ ಬೇಡತಕ್ಕಾಂಥಾದ್ದು ಆಗಿದೆ. ಇದು ಒಂದು ಭಾಗ, ಸನ್ಮಾನ್ಯ ಅಧ್ಯಕ್ಷರೇ, ತಾವೂ ವಕೀಲರು, ನಾನೂ ವಕೀಲ. ನಾವು ಒಂದು ಸಲ ಬಾರ್ ಶಾಸನಸಭೆಯ ಸದಸ್ಯರಾಗಿ, ನಮ್ಮ ಅವಧಿ ಮುಗಿದ ನಂತರ, ಮತ್ತೆ ವಕೀಲಿ ವೃತ್ತಿಯನ್ನು ಪ್ರಾರಂಭ ಮಾಡಬೇಕಾದರೆ, ಅದು ಪ್ರಾರಂಭ ಆಗುತ್ತದೋ ಇಲ್ಲವೋ ಗೊತ್ತಿಲ್ಲ. ಫಸ್ಟ್ ಗೇರ್‌ನಲ್ಲೇ ಫೇಲ್ ಆಗಬಹುದು. ಇಲ್ಲದೇ ಹೋದರೆ ೧೦–೧೫ ವರ್ಷ ವೈಟ್ ಮಾಡಬೇಕಾಗುತ್ತದೆ. ಬೇರೆ ಕೆಲಸದಲ್ಲಿರತಕ್ಕವರದ್ದೂ ಇದೇ ರೀತಿ, ಡಾಕ್ಟರಾಗಿರತಕ್ಕವರದ್ದೂ ಇದೇ ರೀತಿ ವ್ಯವಸಾಯ ಮಾಡತಕ್ಕವರದ್ದೂ ಇದೇ ರೀತಿ. ಆದುದರಿಂದ ಈ ಒಂದು ಹಿನ್ನೆಲೆಯಲ್ಲಿ ಪ್ರಸ್ತುತ ದಿನಗಳಲ್ಲಿ ಶಾಸಕನು ಮಾಡತಕ್ಕ ಕಾರ್ಯಭಾರವನ್ನು, ಕರ್ತವ್ಯದ ಹಿರಿಮೆಯನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ ಎಂದು ಹೇಳಿ, ಈ ಸಮಯದಲ್ಲಿ ಅವರಿಗೆ ನೆನಪು ಮಾಡಿಕೊಡುವುದಕ್ಕೆ ಇಷ್ಟಪಡುತ್ತೇನೆ. ಇದು ಅವರಿಗೆ ಗೊತ್ತಿದೆ. ಆದರೂ ಕೂಡ ಸಂದರ್ಭೋಚಿತವಾಗಿ ವಿಷಯ ಪ್ರಸ್ತಾಪ ಮಾಡಿದರೆ ಒಳ್ಳೆಯದಾಗುತ್ತದೆಂದು, ನೆನಸಿಕೊಂಡ ಹಾಗೆ

Annexure—I

Annexure—II

ಆಗುತ್ತದೆಂದು ಈ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಇದರ ಜೊತೆಗೆ, ಸನ್ಮಾನ್ಯ ಅಧ್ಯಕ್ಷರೇ, ಜೀವನ ಮಾಡತಕ್ಕಂಥ ಬೆಲೆ ಪ್ರತಿದಿನ ಜಾಸ್ತಿಯಾಗುತ್ತಿದೆ. ರೂಪಾಯಿನ ಬೆಲೆ ಇವತ್ತು ೧೪ ಪೈಸೆ ಎಂದು ಹೇಳಿದ್ದಾರೆ. ಪ್ರತಿವರ್ಷವೂ ರೂಪಾಯಿನ ನಿಜವಾದ ಬೆಲೆ ಕುಸಿದು ಬೀಳುತ್ತಿರತಕ್ಕಂಥ ಒಂದು ವಿದ್ಯಮಾನವನ್ನು ನಾವು ಕೇಳುತ್ತಿದ್ದೇವೆ. ಕೊಂಡುಕೊಳ್ಳತಕ್ಕಂಥ ಶಕ್ತಿಯ ಪ್ರಕಾರ ರೂಪಾಯಿನ ಬೆಲೆ ಇವತ್ತು ೧೪ ಪೈಸೆ ಆಥವಾ ೨೦ ಪೈಸೆ ಇರಬಹುದು. ಇದನ್ನೂ ಕೂಡಾ ನಾವು ಗಮನದಲ್ಲಿಟ್ಟುಕೊಳ್ಳಬೇಕು ಎಂದೂ ನಾನು ಭಾವಿಸಿದ್ದೇನೆ. ಇದರ ಜೊತೆಗೆ ಪೆಟ್ರೋಲ್ ಬೆಲೆ, ಡೀಸೆಲ್ ಬೆಲೆ, ಜಾಸ್ತಿಯಾಗಿದೆ. ಪ್ರಜೆಯಾದವನು, ಶಾಸನಾದವನು, ಪ್ರತಿದಿನ ಖರ್ಚು ಮಾಡತಕ್ಕಂಥ ಎಲ್ಲಾ ಬಾಬುಗಳಿಗೂ ಕೂಡಾ ಹೆಚ್ಚಿನ ಬೆಲೆಯನ್ನು ಕೊಡಬೇಕಾಗಿದೆ. ಆದರೆ ಆವನು ಮಾಡತಕ್ಕಂಥ ಕೆಲಸಕ್ಕೆ, ಇರತಕ್ಕಂಥ ಸಂಬಳವಾಗಲೀ, ಭತ್ಯವಾಗಲೀ ಸ್ವಲ್ಪ ಹೆಚ್ಚು ಕಡಿಮೆಯಾಗದೆ, ಈ ಹೆಚ್ಚಳದ ಆಧಾರದ ಮೇಲೆ ಅದು ಹೆಚ್ಚುತ್ತಿಲ್ಲ ಎಂಬ ಮಾತನ್ನೂ ಕೂಡಾ ನಾವು ಈ ಸಮಯದಲ್ಲಿ ಗಮನದಲ್ಲಿಟ್ಟುಕೊಂಡಿರುವುದು ಒಳ್ಳೆಯದೆಂದು ನಾನು ಆಂದುಕೊಂಡಿದ್ದೇನೆ. ಸನ್ಮಾನ್ಯ ಅಧ್ಯಕ್ಷರೇ, ಶಾಸಕನಿಂದ ಪರಿಣಾಮಕಾರಿಯಾದಂಥ ಸೇವೆ ಆಗಬೇಕಾಗಿದ್ದರೆ, ನಿಷ್ಪ್ರಯೋಜಕವಾದ ಸೇವೆ ಆವನಿಂದ ಆಗಬೇಕಾಗಿದ್ದರೆ, ಯಾವುದೇ ಫಿಯರ್ ಇಲ್ಲದೆ. ಫೇವರ್ ಇಲ್ಲದೆ ಗೌರವದಿಂದ, ತನಗೆ ಜನರು ಕೊಟ್ಟಂಥ ಕರ್ತವ್ಯವನ್ನು, ಆದರ ಭಾರವನ್ನು ಪರಿಣಾಮಕಾರಿಯಾದ ರೀತಿಯಲ್ಲಿ ನಿರ್ವಹಿಸಬೇಕಾದಂಥ ರೀತಿಯಲ್ಲಿ ಪರಿಸ್ಥಿತಿಯಲ್ಲಿ ನಾವು ಶಾಸಕರನ್ನು ಇರತಕ್ಕಂಥದ್ದು, ಶಾಸಕನ ಸಹಾಯಕ್ಕಾಗಿ ನಿಲ್ಲತಕ್ಕಂಥಾದ್ದೂ ನಮಗಳೆಲ್ಲರ ಕರ್ತವ್ಯ ಎಂದು ನಾನು ಆಂದುಕೊಂಡಿದ್ದೇನೆ.

ಏನೂ ಬೇಡ, ನನಗೆ ಯಾವ ವಿಧವಾದ ಸಂಬಳ, ಭತ್ಯೆ ಬೇಡ ಎಂದು ಹೇಳುವವರೂ ಇರಬಹುದು. ಯಾವ ವಿಧವಾದ ಸಂಬಳ, ಭತ್ಯೆ ತೆಗೆದುಕೊಳ್ಳದೇ ಪ್ರಜಾಸೇವೆಯನ್ನು ಮಾಡತಕ್ಕಂಥ ಜನರೂ ಇದ್ದಾರೆ. ಮಾನ್ಯ ವೆಂಕಟರಾವಯ್ಯನವರು ಆ ರೀತಿ ಮಾಡಬಹುದು. ಆದರೆ ನನಗೆ ಆ ಶಕ್ತಿ ಇಲ್ಲ. ನಾನು ಒಬ್ಬನೇ ಇದ್ದರೂ ಕೂಡ ಶಾಸಕನಾಗಿರುವ ಸಮಯದಲ್ಲಿ ಹಸಿವು, ತೃಷೆ, ಬಾಯಾರಿಕೆ ಈ ಮೂರು ತಂತ್ರಗಳಿಗೆ ಜೀವಿಯಾದವನು ಒಳಪಟ್ಟಿರುತ್ತಾನೆ. ಇದನ್ನು ತಪ್ಪಿಸುವುದಕ್ಕೆ ಯಾರಿಂದಲೂ ಸಾಧ್ಯವಿಲ್ಲ ನನ್ನ ಕೆಲಸ ಸರಿಯಾಗಿ ಮಾಡಬೇಕಾದರೆ, ನನ್ನ ಕೆಲಸ ಸಮಯದಲ್ಲಿ ಅದಕ್ಕೆ ಪರಿಹಾರ ಸಿಗಬೇಕಾದ್ದು ನ್ಯಾಯವೆಂದು ತಿಳಿದುಕೊಂಡಿದ್ದೇವೆ. ವಿಷ್ಣುವಾರಿಗಳಾಗಿ ಮಾತನಾಡುವುದು ಬೇಡವೆಂದು ಹೇಳುವುದಕ್ಕೆ ಇಚ್ಛಿಪಡುತ್ತೇನೆ. "ಪರೋಪಕಾರಾಯ, ಪುಣ್ಯಾಯ ಪಾಪಾಯ ಪರ ಪೀಡನಂ" ಎಂದು ಒಂದು ಸುಭಾಶಿತ ಇದೆ. ಈ ಸಮಯದಲ್ಲಿ ಇದನ್ನು ಜ್ಞಾಪಕ ಮಾಡಿಕೊಳ್ಳುವುದು ಒಳ್ಳೆಯದು. ಯಾವ ಪ್ರತಿಫಲವೂ ಇಲ್ಲದೆ ಜೀವನದ ತನುಮನ ಧನವನ್ನು ಸಮಾಜ ಸೇವೆಗೆ ಇಟ್ಟಿದ್ದಾನೆ ಎಂಬ ಮಹಾತ್ಮನನ್ನು ನಾನು ಈವರೆವಿಗೂ ನೋಡಲಿಲ್ಲ. ಈ ಸಾಹಸವನ್ನು ಮಾನ್ಯ ವೆಂಕಟರಾವಯ್ಯನವರು ಮಾಡುವುದಾದರೆ, ಜೀವನದ ಉದ್ದಕ್ಕೂ, ಅವರ ಶಿಷ್ಯನು ಶಿಷ್ಯನಾಗಿ ನಾನು ಸೇವೆ ಸಲ್ಲಿಸಂತ್ತೇನೆ ಎಂಬ ಮಾತನ್ನು ಹೇಳುತ್ತೇನೆ. ಈಗ ಜಿಲ್ಲಾ ಪರಿಷತ್ತು ಬಂದಿದೆ, ಮಂಡಲ್ ಪಂಚಾಯಿತಿ ಬಂದಿದೆ. ಶಾಸಕರಿಗೆ ಕೆಲಸ ಕಡಿಮೆಯಾಗಬಹುದು ಎಂಬ ಮಾತಿದೆ. ಕೆಲಸ ಕಡಿಮೆ ಆಗುವುದಿಲ್ಲ. ಬಸ್ಸಿನಲ್ಲಿ ಹೋಗುವುದು ಕಡಿಮೆ ಆಗುವುದಿಲ್ಲ. ಆವರ ಕೆಲಸದ ಪ್ರಮಾಣ, ಕೆಲಸದ ತೀಕ್ಷ್ಣತೆ ಕೆಲಸದ ಗಾತ್ರ ಯಾವುದರಲ್ಲಿಯೂ ಕಿಂಚಿತ್ತೂ ಕಡಿಮೆಯಾಗುವುದಿಲ್ಲವೆಂಬುದು ಅನುಭವದಿಂದ ತಿಳಿದವರಿಗೆ ಗೊತ್ತಾಗುತ್ತದೆ. ಈ ವಂಶವು ಸ್ವೇಚ್ಛೆತರು ಪ್ರತಿಭಾನ್ವಿತ ವ್ಯಕ್ತಿಗಳು, ಸಮಾಜದಲ್ಲಿ ನಿರಂತರವಾಗಿ ಸೇವೆ ಸಲ್ಲಿಸತಕ್ಕಂಥ ಸದಸ್ಯರು. ಇದರ ಉದ್ದೇಶವನ್ನು ತಿಳಿದುಕೊಂಡಿದ್ದಾರೆಂದು ಪ್ರಾಸ್ತಾವಿಕವಾಗಿ ಹೇಳಿದ್ದೇನೆ. ಎಷ್ಟು ಹೆಚ್ಚಳ ಮಾಡಿದ್ದೇವೆಂಬುದನ್ನು ಈಗಾಗಲೇ ಹೇಳಿದ್ದೇನೆ. ಆದರೆ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಸದಸ್ಯರ ಸಂಬಳ ಹೆಚ್ಚು ಮಾಡಿದ್ದುದು ೧೯೭೮ ರಲ್ಲಿ, ಆವರ ಭತ್ಯ ಇತ್ಯಾದಿಗಳನ್ನು ಹೆಚ್ಚಿಸಿದ್ದು ೧೯೮೫ ರಲ್ಲಿ. ರೈಲ್ವೆ ಕೂಪನ್ ಬಗ್ಗೆ ಹೆಚ್ಚಳ ಮಾಡಿದ್ದುದು ೧೯೮೦ರಲ್ಲಿ. ಮೈಲೇಜ್ ಅಲೋಯನ್ಸ್ ಹೆಚ್ಚು ಮಾಡಿದ್ದುದು ೧೯೮೦ ರಲ್ಲಿ. ಡಿ.ಎ. ಹೆಚ್ಚು ಮಾಡಿದ್ದು ೧೯೭೮ ರಲ್ಲಿ ೫೧ ರೂಪಾಯಿ ಹೆಚ್ಚು ಮಾಡಿದ್ದು. ನಿವೃತ್ತಿ ವೇತನ ಹೆಚ್ಚು ಮಾಡಿದ್ದುದು ೧೯೮೪ ರಲ್ಲಿ. ಪ್ರುಸೈಂಡಿಗ್ ಆಫೀಸರ್ಸ್ ಕನ್‌ವೀನಿಯನ್ಸ್ ಅಲೋಯನ್ಸ್ ಹೆಚ್ಚು ಮಾಡಿದ್ದುದು ೧೯೮೧ ರಲ್ಲಿ, ಮೈಲೇಜ್ ಅಲೋಯಿನ್ಸ್ ಹೆಚ್ಚು ಮಾಡಿದ್ದುದು ೧೯೮೧ ರಲ್ಲಿ, ಡಿ. ಎ. ಹೆಚ್ಚು ಮಾಡಿದ್ದುದು ೧೯೮೧ ರಲ್ಲಿ. ಈ ರೀತಿ ಹೆಚ್ಚಳ ಮಾಡಿರುವುದು ಈಗಾಗಲೇ ಸಾಕಷ್ಟು ಕಾಲಾವಕಾಶ ನಡೆದು ಹೋಗಿದೆ. ಕಾಲದ ಗತಿಯನ್ನು ಅನುಸರಿಸಿ ನಡೆದು

ಕೊಂಡು ಹೋಗುವುದು ಎಲ್ಲರ ಕರ್ತವ್ಯ. ಕಾಲ ಗತಿಗೆ ವಿರುದ್ಧವಾಗಿ ನಡೆದುಕೊಂಡರೆ, ಬಹಳ ಕಾಲ ಉಳಿಯುವುದಿಲ್ಲವೆಂದು ತಿಳಿದುಕೊಂಡಿದ್ದೇವೆ. ಇದು ಹೆಚ್ಚಳ ವೆಂದು ಯಾರೂ ಅಂದುಕೊಳ್ಳುವುದಿಲ್ಲ. ಮಾನ್ಯ ಸದಸ್ಯರು ಇದಕ್ಕೆ ಸಂಪೂರ್ಣವಾದ ಬೆಂಬಲ ಸೂಚಿಸಬೇಕೆಂದು ವಿನಯಪೂರ್ವಕವಾಗಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ನಾವು ೨೨೫ ಜನ ಸದಸ್ಯರು ಇದ್ದೇವೆ ನಾವು ಹೆಚ್ಚು ಪರಿ ಕೇಳಿರುವುದು ೫೮ ಲಕ್ಷ ರೂಪಾಯಿಗಳು. ಲೆಕ್ಕ ಹಾಕಿದರೆ ಸರಾಸರಿ ೩೦ ಸಾವಿರ ರೂಪಾಯಿಗಳು ಒಬ್ಬ ಸದಸ್ಯರಿಗೆ ಜಾಸ್ತಿಯಾಗುತ್ತವೆ. ನಾವು ೪ ಕೋಟಿ ಜನರ ಪ್ರತಿನಿಧಿಗಳು. ನಾವು ದುಡ್ಡನ್ನೇ ಆಧಾರ ವಾಗಿಟ್ಟುಕೊಂಡು ಇಲ್ಲಿಗೆ ಬಂದಿಲ್ಲ. ಅದು ಬೇರೆ. ನೀವು ೩-೪ ಸಾವಿರ ಕೊಟ್ಟರೂ ಆಸೆಗೆ ಮಿತಿ ಇಲ್ಲ. ಟಾಟಾ, ಬಿರ್ಲಾಗೆ ಬೇಕಾದಷ್ಟು ಇದೆ. ಆದರೂ ಅವರಿಗೆ ಇನ್ನೂ ದುರಾಸೆ ಇದೆ. ಆದ್ದರಿಂದ ಅಸೆಂಬ್ಲಿ ಸದಸ್ಯರಿಗೆ ೨ ಸಾವಿರ ಕೊಡುವುದರಿಂದ, ೩ ಸಾವಿರ ಕೊಡುವುದರಿಂದ ನಮ್ಮ ಪರಿಸ್ಥಿತಿ ಸರಿಯಾಗುತ್ತದೆಂದು ಹೇಳುವುದಿಲ್ಲ. ಎಷ್ಟು ಕೊಟ್ಟರೂ ಸಾಕಾಗುವುದಿಲ್ಲ. ಪಿ.ಡಬ್ಲ್ಯೂ.ಡಿ ಇಲಾಖೆಯ ವರ್ಕರ್ಸ್‌ಗಳು ನಮಗೆ ಸಂಬಳ ಜಾಸ್ತಿ ಮಾಡಿ ಎಂದು ಸ್ಟ್ರೈಕ್ ಮಾಡಿದ್ದರು. ಅವರಿಗೆ ತಿಂಗಳಿಗೂ ಮುನ್ನೂರು ರೂಪಾಯಿಗಳನ್ನು ಕೊಡುತ್ತಿದ್ದಾರೆ. ಇನ್ನು ನೂರು ರೂಪಾಯಿಗಳನ್ನು ಅವರುಗಳಿಗೆ ಹೆಚ್ಚಿಸಲು ಸರ್ಕಾರ ಕ್ರಮ ತೆಗೆದುಕೊಳ್ಳಲಿಲ್ಲ. ಕೃಷಿ ಕಾರ್ಮಿಕರಿಗೆ ತಿಂಗಳಿಗೆ ೨೦೦ ರೂಪಾಯಿಗಳನ್ನು ಕೊಡುತ್ತಿದ್ದೀರಿ. ಅವರು ಸಂಬಳವನ್ನು ಹೆಚ್ಚಿಗೆ ಮಾಡಿ ಎಂದು ೧೦ ವರ್ಷ ಗಳಿಂದಲೂ ಕೇಳುತ್ತಿದ್ದಾರೆ. ಅವರಿಗೆ ಸಂಬಳ ಹೆಚ್ಚು ಮಾಡಿಲ್ಲ. ಮಾನ್ಯ ಬಸವಲಿಂಗಪ್ಪನವರು ಮತ್ತು ಲಕ್ಷ್ಮೀಸಾಗರ್‌ರವರು ಇಬ್ಬರೂ ಮಾತನಾಡಿಕೊಂಡು ಈ ಪ್ರಸ್ತಾವನೆಯನ್ನು ಮಾಡಿದ್ದಾರೋ ಏನೋ ಗೊತ್ತಿಲ್ಲ.

ಅಧ್ಯಕ್ಷರು.—ಇಬ್ಬರೂ ಮಾತನಾಡಿಕೊಂಡು ಮಾಡಿದರು ಎಂದು ಹೇಳುವುದು ಸರಿಯಲ್ಲ. ಇದರಲ್ಲಿ ಅವರ ಸ್ವಾರ್ಥ ಏನೋ ಇದೆ.

ಶ್ರೀ ಆರ್. ವೆಂಕಟರಾಮಯ್ಯ.—೩ ದಿವಸ ಹಿಂದೆಯೇ ಇದರ ಬಗ್ಗೆ ಪ್ರಸ್ತಾವನೆ ಮಾಡಿದ್ದರು. ಈಗ ಅದರ ಬಿಲ್‌ನ್ನು ತಂದಿದ್ದಾರೆ. ಅಂದರೆ, ಇವರು ಇಬ್ಬರೂ ಮಾತನಾಡಿಕೊಂಡು ಮಾಡಿರ ಬಹುದೆಂದು ನನಗೆ ಒಂದು ಅನುಮಾನ.

(ಗೊಂದಲ)

ಶ್ರೀ ಆರ್. ವೆಂಕಟರಾಮಯ್ಯ.—ಟಿ.ಎ. ೧.೫೦ ಪೈಸೆ ಕಿಲೋ ಮೀಟರ್‌ಗೆ ಇತ್ತು. ಅದನ್ನು ೨.೫೦ ಪೈಸೆಗೆ ಏರಿಸಿದ್ದಾರೆ. ಅದರ ಅವಶ್ಯಕತೆ ಏನಿತ್ತು ? ಶಾಸಕರ ಸಂಬಳ ಸಾರಿಗೆಗಳನ್ನು ಎರಡು ಸಾವಿರದಿಂದ ಮೂರು ಸಾವಿರ ರೂಪಾಯಿಗಳ ವರೆಗೆ ಏರಿಸಿರುವ ವಿಧೇಯಕವನ್ನು ಸಭೆಯು ಮುಂದೆ ತಂದು ಪಾಸ್ ಮಾಡಿಕೊಳ್ಳಬಹುದು. ನಾಳೆ ದಿನ ಬೀದಿಯಲ್ಲಿ ಜನರಿಗೆ ಇದರ ಬಗ್ಗೆ ನಾವು ಆನ್ಸರ್ ಮಾಡಬೇಕಾಗಿರುತ್ತದೆಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಸುಮಾರು ೧೪೫ ಜನ ನೌಕರರು ಮೂರು ತಿಂಗಳಿನಿಂದ ನಮಗೆ ನೂರು ರೂಪಾಯಿ ಸಂಬಳ ಜಾಸ್ತಿ ಮಾಡಿ ಎಂದು ಮುಷ್ಕರ ಮಾಡಿದರೂ ಅವರಿಗೆ ಸಂಬಳವನ್ನು ಜಾಸ್ತಿ ಮಾಡಲಿಲ್ಲ. ಆನ್-ಆರ್ಗನೈಸ್ಡ್ ವರ್ಕರ್ಸ್‌ಗಳಿಗೆ ೧೦ ವರ್ಷಗಳಿಂದಲೂ ರಿಲೀಫ್ ಕೊಟ್ಟಿಲ್ಲ. ಯಾರಾದರೂ ಸಂಬಳ ಸಾರಿಗೆಗಳನ್ನು ಜಾಸ್ತಿ ಮಾಡಿ ಎಂದು ಕೇಳಿಕೊಂಡಾಗ, ಒಂದು ಕಮಿಟಿ ಮಾಡುತ್ತೀರಿ. ಕಮಿಟಿಯವರು ತೀರ್ಮಾನ ಮಾಡಿದ್ದನ್ನೂ ನಾವು ಲೆಕ್ಕಕ್ಕೆ ತೆಗೆದು ಕೊಳ್ಳುವುದಿಲ್ಲ. ಆದರೆ, ಈಗ ಶಾಸಕರಿಗೆ ಸಂಬಳವನ್ನು ಹೆಚ್ಚಿಗೆ ಮಾಡುವುದಕ್ಕೆ ಯಾವ ಕಮಿಟಿ ಯನ್ನೂ ಮಾಡಲಿಲ್ಲ. ಪೆಟ್ರೋಲ್ ಬೆಲೆ ಜಾಸ್ತಿಯಾಗಿ, ರೂಪಾಯಿ ಬೆಲೆ ಕೆಳಗೆ ಬಂದಿದೆ ಎಂದು ಸಂಬಳಗಳನ್ನು ಹೆಚ್ಚು ಮಾಡಿದ್ದೀರಿ ಸಂಬಳ ಜಾಸ್ತಿ ಮಾಡಲೇ ಬೇಕು ಎಂದು ಯಾರೂ ಕೇಳಿರಲಿಲ್ಲ. ಇಂಥ ಕಷ್ಟ ಕಾಲದಲ್ಲಿ ೬೦ ಲಕ್ಷ ರೂಪಾಯಿಗಳನ್ನು ನಮ್ಮ ಸಂಬಳಕ್ಕೆ ಉಪಯೋಗಿಸುವುದು ಖಂಡನೀಯ ವೆಂದು ಹೇಳಿ ಈ ವಿಧೇಯಕವನ್ನು ನಾನು ವಿರೋಧ ಮಾಡುತ್ತೇನೆ.

ಶ್ರೀ ಪಂಪಾಪತಿ.—ಮಾನ್ಯ ಅಧ್ಯಕ್ಷರೇ, ಶಾಸಕರ ಮತ್ತು ಮಂತ್ರಿಗಳ ವೇತನ ಮತ್ತು ಭತ್ಯೆ ಯನ್ನು ಹೆಚ್ಚಿಸಿದ್ದಾರೆ. ಈಗ ನಾನು ಇಷ್ಟು ಮಾತ್ರ ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಮಾನ್ಯ ವೆಂಕಟರಾಮಯ್ಯನವರು ಎಲ್ಲಾ ಹೇಳಿದ್ದಾರೆ. ಈ ದಿವಸ ಸಮತಾವಾದವನ್ನು ನಾವು ಕೇಳುತ್ತೇವೆ.

ಎಲ್ಲರೂ ಸಮಾನವಾಗಿ ಇರತಕ್ಕಂಥ ಒಂದು ಸಮಾಜವಾದ ಸಮಾಜವನ್ನು ನಿರ್ಮಾಣ ಮಾಡಬೇಕೆಂದು ಒಂದು ಕಡೆ ಹೇಳುತ್ತಾರೆ. ತಿಂಗಳಿಗೆ ಮುನ್ನೂರು ರೂಪಾಯಿಗಳನ್ನು ಕೊಟ್ಟು ಕೆಲಸಗಾರರಿಂದ ಕೆಲಸವನ್ನು ಮಾಡಿಸುತ್ತೇವೆ. ಇನ್ನೊಂದು ಕಡೆ ಮೂರು ಸಾವಿರದವರೆಗೆ ಸಂಬಳವನ್ನು ಜಾಸ್ತಿ ಮಾಡುತ್ತಿದ್ದಾರೆ. ಇದರಿಂದ ಸಮತಾವಾದದ ಮಾತು ದೂರ ದೂರ ಆಯಿತು. ಸಮತಾವಾದ ಆದಷ್ಟು ಹತ್ತಿರ ಹತ್ತಿರ ಬರಬೇಕು. ಪಿ.ಡಬ್ಲ್ಯೂ.ಡಿ. ಇಲಾಖೆ ಮತ್ತು ಆನೇಕ ಕೈಗಾರಿಕೆಗಳು ಹಾಗೂ ಇಲಾಖೆಗಳಲ್ಲಿ ಸಾವಿರಾರು ಜನರಿಗೆ ಕನಿಷ್ಟ ಕೂಲಿಯನ್ನು ಸಹ ನಿಗದಿ ಮಾಡದೇ ಕೆಲಸವನ್ನು ಮಾಡಿಸುತ್ತಿದ್ದೇವೆ. ಸರ್ಕಾರಿ ಇಲಾಖೆಗಳಲ್ಲಿ ಕೆಲಸ ಮಾಡುತ್ತಿರುವ ದಿನಗೂಲಿ ನೌಕರಿಗೆ ದಿನಕ್ಕೆ ೧೦ ರೂಪಾಯಿಗಳೂ ಸಹ ಸಿಗುತ್ತಿಲ್ಲ. ಅಂಥಹ ನೌಕರರ ಬಗ್ಗೆ ಏನು ಮಾಡುವುದು ? ಅವರು ಆಷ್ಟೇ ಕೂಲಿ ತೆಗೆದುಕೊಳ್ಳಲಿ ಎಂದು ಹೇಳುವುದೇ ? ಒಂದು ಕಡೆ ಕಡಿಮೆ ಕೂಲಿಗೆ ಜನ ಕೆಲಸ ಮಾಡುತ್ತಿದ್ದಾರೆ, ಇನ್ನೊಂದು ಕಡೆ ನಾವು ಸಂಬಳ ಜಾಸ್ತಿ ಮಾಡಿಕೊಳ್ಳುವುದು ಸರಿಯೇ ? ನಾವು ಇರುವುದು ಸ್ವಲ್ಪ ಜನ ಮಾತ್ರ. ನಮಗೆ ಸಂಬಳ ಜಾಸ್ತಿ ಮಾಡಿಕೊಂಡು ಬಿಟ್ಟರೆ ಎಲ್ಲಾ ಸರಿ ಹೋಗುತ್ತದೆಯೋ? ಕಾಯಿದೆ ಮಾಡತಕ್ಕಂಥ ನಾವು ಬೇರೆಯವರ ಬಗ್ಗೆ ಚಿಂತನೆ ಮಾಡಬೇಕು. ನಮಗಿಂತ ಕಡಿಮೆ ದರ್ಜೆಯಲ್ಲಿ ಜೀವನ ಮಾಡತಕ್ಕಂಥವರ ಬಗ್ಗೆ ಯೋಚನೆ ಮಾಡಬೇಕು. ನಮಗೆ ಆನೇಕ ತೊಂದರೆಗಳು ಇವೆ ಎಂದು ಹೇಳುವುದಕ್ಕಿಂತಲೂ ಬೇರೆಯವರಿಗೆ ಏನು ತೊಂದರೆಗಳು ಇದೆ ಎಂಬುದನ್ನು ನಾವು ತಿಳಿದುಕೊಳ್ಳಬೇಕು. ಬಹಳ ಕಡಿಮೆ ಕೂಲಿ ತೆಗೆದುಕೊಂಡು ಜೀವನ ಮಾಡತಕ್ಕಂಥ ಜನ ಇದ್ದಾರೆ. ಒಂದು ರೂಪಾಯಿಗೆ ೧೪ ಪೈಸೆ ಬೆಲೆ ಇದೆ ಎಂದು ಹೇಳಿದ್ದಾರೆ. ಇಡೀ ರಾಜ್ಯದ ಜನತೆಗೂ ಕೂಡ ಒಂದು ರೂಪಾಯಿಗೆ ೧೪ ಪೈಸೆ ಬೆಲೆ ಇದೆ, ಕೇವಲ ಶಾಸಕರಿಗೆ ಮಾತ್ರ ಅಲ್ಲ.

ತಾವುಗಳು ಬೇರೆಯವರ ಬಗ್ಗೆ ಮಾತನಾಡುವುದಾದರೆ ಖಂಡಿತವಾಗಿಯೂ ಕೂಡ ಅವರಿಗೆ ಹೆಚ್ಚು ಮಾಡತಕ್ಕಂಥ ಪ್ರಯತ್ನ ನಡೆಯುತ್ತಾ ಇತ್ತು ಆ ಪ್ರಯತ್ನ ನಡೆಯದೇ ನಮಗೆ ಕಡಿಮೆಯಾಗಿದೆ.ನಮಗೆ ಅನೇಕತೊಂದರೆಗಳು ಇವೆ. ಎಂದು ಹೇಳುವುದಕ್ಕಿಂತಲೂ ಇವೊತ್ತು ಬೇರೆಯವರಿಗೆ ಹೆಚ್ಚು ಮಾಡಿ, ಆ ಮೇಲೆ ನಮ್ಮ ಬಗ್ಗೆ ಯೋಚನೆ ಮಾಡಿದ್ದರೆ, ಆದು ನಿಜವಾಗಿಯೂ ಒಂದು ಸಂತೋಷದ ವಿಚಾರ ವಾಗುತ್ತಿತ್ತು. ಇವೊತ್ತು ಬಹಳ ಕಡಿಮೆ ಕೂಲಿ ತೆಗೆದುಕೊಂಡು ಜೀವನ ಮಾಡತಕ್ಕಂಥ ಜನರಿದ್ದಾರೆ. ಈಗ ಹಣದ ಆಪಮೌಲ್ಯವಾಗಿರುವುದು ಕೇವಲ ಶಾಸಕರಿಗೆ ಮಾತ್ರವಲ್ಲ. ಇಡೀ ರಾಜ್ಯದ ಜನರಿಗೆ ಅವರ ಪರಿಣಾಮವಾಗಿದೆ. ರಾಜ್ಯದಲ್ಲಿನ ಕೃಷ್ಟಿ ಕಾರ್ಮಿಕರಿಂದ ಹಿಡಿದು, ಪ್ರತಿಯೊಬ್ಬರಿಗೂ ರೂಪಾಯಿಯ ಬೆಲೆ ೧೪ ಪೈಸೆಯಾಗಿದೆ. ಕೂಲಿಗಾರನೂ ಕೂಡ ಬಸ್‌ನಲ್ಲಿ ಹೋಗಬೇಕು, ಬರಬೇಕು ಇತರ ತನ್ನ ಜೀವನ ನಿರ್ವಹಣೆಯನ್ನು ನಮ್ಮಂತೆಯೇ ನೋಡಿಕೊಳ್ಳ ಬೇಕಾಗಿ. ನಾವುಗಳು ಆವನಿಗೆ ಇರತಕ್ಕಂಥ ಕಷ್ಟವನ್ನು ಯೋಚನೆ ಮಾಡಿ ನೋಡಿದಾಗ ಇದು ಎಷ್ಟು ಶೋಚನೀಯ ಎಂಬುದು ಅರ್ಥವಾಗುತ್ತದೆ. ನಾವುಗಳು ಬರುವ ಎರಡು ಸಾವಿರ ರೂಪಾಯಿಗಳಲ್ಲಿ ಹೇಗೊ ಎರಡು ಹೊತ್ತು ಊಟ ಮಾಡಿಕೊಂಡು ಬದುಕಬಹುದು. ಆದೇ ದಿನಕ್ಕೆ ಹತ್ತು ರೂಪಾಯಿಗಳ ಕೂಲಿ ಪಡೆಯು ವಾತನ ಗತಿ ಏನು ಎಂಬುದನ್ನು ಯೋಚಿಸಿ ಮಾಡಬೇಕಾಗಿದೆ. ಆದುದರಿಂದ ರಾಜ್ಯದಲ್ಲಿನ ಕೂಲಿಕಾರರಿಗೆ ದೊರಕುವ ಕೂಲಿಯ ಬಗ್ಗೆ ಬೇರೆ ಬೇರೆ ರಾಜ್ಯಗಳಲ್ಲಿನ ಕನಿಷ್ಟ ಕೂಲಿಯೊಂದಿಗೆ ಹೋಲಿಸಿ ನೋಡಿ, ಇವರಿಗೂ ಕೂಡ ಈಗಿನ ಪರಿಸ್ಥಿತಿಗೆ ಅನುಸರಿಸಿ ಕೂಲಿಯನ್ನು ದೊರಕಿಸಿಕೊಡ ಬೇಕು ಹಾಗು ಆ ಬಡಜನರ ಬಗ್ಗೆಯೂ ಯೋಚನೆ ಮಾಡಬೇಕು ಎಂದು ಹೇಳಿ ಅವಕಾಶವನ್ನು ಕೊಟ್ಟ ಆವರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಆಧ್ಯಕ್ಷರೇ, ಮಾನ್ಯ ಪಂಪಾಪತಿಯವರು ಮತ್ತು ಮಾನ್ಯ ವೆಂಕಟರಾಮಯ್ಯನವರು, ತಮ್ಮ ಮಾತುಗಳಲ್ಲಿ ಯಥಾವಿಧಿಯಾಗಿ ತಮಗೆ ಏನೂ ಬೇಡ ಎಂಬ ರೀತಿಯಲ್ಲಿ ಹೇಳಿಬಿಟ್ಟು,ತತ್ವಗಳ ನೆನಪನ್ನು ಮಾಡಿಕೊಂಡು ತತ್ವಗಳ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಬಹಳ ಕಡಿಮೆ ಪ್ರಮಾಣದಲ್ಲಿ ಸಂಪಾದನೆ ಮಾಡತಕ್ಕಂಥವರು ಇದ್ದಾರೆ. ಬಹಳ ಕಡಿಮೆ ಕೂಲಿಯಂನ್ನು ಕೂಡ ಪಡೆಯಂತಕ್ಕಂಥವರು ಇದ್ದಾರೆ,ಅಂತಹವರುಗಳ ಬಗ್ಗೆ ಯೋಚನೆ ಮಾಡಬೇಕು, ಅವರ ಬಗ್ಗೆ ಸ್ವಾತಂತ್ರವನ್ನು ತೋರಿಸಬೇಕೆನ್ನುವ ಬಗ್ಗೆ ಮಾನ್ಯ ಪಂಪಾಪತಿಯವರು ಹೇಳಿದ್ದಾರೆ, ಅವರ

ವಾದವನ್ನು ನಾನು ಒಪ್ಪಿಕೊಳ್ಳುತ್ತೇನೆ. ಆ ಕೆಲಸವನ್ನು ನಾವು ಇಲ್ಲಿ ಮಾಡಿಕೊಂಡು ಬಂದಿದ್ದೇವೆ, ಅವರೂ ಕೂಡ ಮಾಡಿಕೊಂಡು ಬಂದಿದ್ದಾರೆ. ಎಲ್ಲಿ ಶೋಷಣೆ ನಡೆಯುತ್ತಾ ಇದ, ಅದಂ ಹೋಗ ಬೇಕಂ. ಕಡಿಮೆ ಸಂಬಳ ಎಲ್ಲಿದೆ ಅದು ಜಾಸ್ತಿಯಾಗಬೇಕು ಎಂತಲೂ ಕೂಡ ಹೇಳಿದ್ದಾರೆ. ಹೆಚ್ಚಿದ ಜೀವನವೆಚ್ಚದಲ್ಲಿ ಈ ಕೂಲಿಗಾರರಿಗೂ ಹೆಚ್ಚಳವಾಗಬೇಕೆಂದು ಅವರ ವಾದ ಇದೆ. ಮಾನ್ಯ ಪಂಪಾಪತಿಯವರ ವಾದವನ್ನು ಒಪ್ಪಿಕೊಂಡು ಆ ದಿಸೆಯಲ್ಲಿ ಪ್ರಯತ್ನ ಮಾಡೋಣ. ಹಾಗೆಯೇ ಮಾನ್ಯ ಪಂಪಾಪತಿಯರ ಆರೋಗ್ಯ, ಮನಸ್ಸಿನ ಸಂಕಲ್ಪ, ಇವುಗಳೆಲ್ಲ ಚೆನ್ನಾಗಿ ಇದ್ದರೆ. ಅವರು ಬೇರೆಯವರ ಪರವಾಗಿ ಹೊಡೆದಾಡಬಹುದು. ಆ ಒಂದು ಶಕ್ತಿಯಾ ಅವರಲ್ಲಿ ಇರುತ್ತವೆ. ಅವರೇ ಕಾಯಿಲೇ ಮನುಷ್ಯನಾಗಿದ್ದರೆ ಬೇರೆಯವರ ಪರವಾಗಿ ಅವರು ಹೇಗೆ ಹೊಡೆದಾಡುವುದಕ್ಕೆ ಸಾಧ್ಯವಾದೀತು? ಇದರ ಬಗ್ಗೆ ಮಾನ್ಯರು ಚಿಂತನೆ ಮಾಡಬೇಕೆಂದು ಅವರಲ್ಲಿವಿನಯದಿಂದ ವಿನಂತಿ ಮಾಡುತ್ತಾ, ಮಾನ್ಯ ವೆಂಕಟರಾಮಯ್ಯನವರ ವಿಷಯದಲ್ಲಿ ಹೇಳುವುದಾದರೆ, ಅವರು ಎಲ್ಲಾ ವಿಷಯಗಳಿಗೂ ವಿರೋಧವನ್ನು ಮಾಡುತ್ತಿರುತ್ತಾರೆ. ಸೂರ್ಯ ಪೂರ್ವದಲ್ಲಿ ಹುಟ್ಟುತ್ತಾನೆ ಎಂದು ಹೇಳಿದರೆ ಅದಂ ಹೇಗೆ ಸಾಧ್ಯ ಎಂದು ನನ್ನನ್ನೇ ಕೇಳುತ್ತಾರೆ. ಒಟ್ಟಿನಲ್ಲಿ ವಿರೋಧ ಮಾಡುವುದು ಅವರ ಪ್ರವೃತ್ತಿಯೇಥೀ ಅಂದರೆ ಪ್ರೀತಿ ಎಂದೆನ್ನುತ್ತಾರೆ. ಅವರದ್ದು ವಿತ್ತಂಡವಾದ. ಮಾಡಲಿ, ನಾನು ಅದಕ್ಕೆ ಬೇಡ ಎಂದು ಹೇಳುವುದಿಲ್ಲ. ಆದರೂ ಒಂದು ಮಾತನ್ನು ತಮ್ಮ ಮೂಲಕ ಅವರಿಗೆ ಹೇಳ ಬಯಸುತ್ತೇನೆ. ಅದೇನೆಂದರೆ, ಏನು ಈಗ ನಾವುಗಳು ಸಂಬಳ ಸಾರಿಗೆಯನ್ನು ಹೆಚ್ಚು ಮಾಡಿದ್ದೇವೆ. ಆ ಬಗ್ಗೆ ನಿಜವಾಗಿಯೂ ನನ್ನ ಮಾತಿನಲ್ಲಿ ಅವರಿಗೆ ನಂಬಿಕೆ ಇದ್ದರೆ, ಪದವಾಕ್ಯ ಪ್ರಮಾಣದಂತೆ ನಡೆದುಕೊಳ್ಳುವ ಒಂದು ಗುಣ ಅವರಲ್ಲಿ ಇದ್ದರೆ ಪದವಾಕ್ಯ ಪ್ರಮಾಣದ ಪ್ರಕಾರ ನಡೆಯುವ ತಕ್ಕಂಥ ಶಕ್ತಿ ಅವರಲ್ಲಿ ಇದ್ದರೆ, ಅದು ಇದೆ ಎಂದು ಭಾವಿಸಿಕೊಂಡು, ಅವರು ಈ ಹೆಚ್ಚಳವಾದ ಸಂಬಳವನ್ನು ತೆಗೆದುಕೊಳ್ಳದಿರತಕ್ಕಂಥ ಒಂದು ನಿರ್ಧಾರವನ್ನು ಇಲ್ಲಿ ತೆಗೆದುಕೊಳ್ಳಲಿ, ಆ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಲಿ, ಘೋಷಣೆ ಮಾಡಲಿ ಆಗ ನಾನು ಅವಕ್ಕೆ ಸೈ ಎಂದು ಹೇಳುತ್ತೇನೆ.

(ಗೊಂದಲ)

ಶ್ರೀ ಆರ್. ವೆಂಕಟರಾಮಯ್ಯ.—ನಾವು ತೆಗೆದುಕೊಳ್ಳುವುದಿಲ್ಲ, ಸಂತೋಷದಿಂದ ಬಿಡುತ್ತೇವೆ.

ಶ್ರೀ ಪಂಪಾಪತಿ.—ನಾವು ತೆಗೆದುಕೊಳ್ಳುವುದಿಲ್ಲ, ನೀವುಗಳು ಕೂಡ ಅದೇ ರೀತಿಯಲ್ಲಿ ನಡೆದುಕೊಳ್ಳಬೇಕು ಹಾಗೆ ನಡೆದುಕೊಳ್ಳುತ್ತೀರಾ?

(ಗೊಂದಲ)

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಲಕ್ಷ್ಮೀಸಾಗರ್‌ರವರು ತೆಗೆದುಕೊಳ್ಳದಿದ್ದರೆ ನಾವು ತೆಗೆದುಕೊಳ್ಳುವುದಿಲ್ಲ ಎಂದು ಹೇಳುತ್ತೇನೆ...

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೇ, ನಾನು ಮಿಥ್ಯಾಚಾರಿಯಾಗಿ ಮಾತನಾಡುತ್ತಿಲ್ಲ ಹಾಗೆ ಜೀವನ ಮಾಡುವುದೂ ಇಲ್ಲ ಎಂದು ಪ್ರಾರಂಭದಲ್ಲೇ ಹೇಳಿದ್ದೇನೆ. ಆಡುವುದು ಒಂದಂ ಮಾಡುವುದು ಇನ್ನೊಂದು ನನ್ನ ನೀತಿ ಅಲ್ಲ, ನನಗೊಬ್ಬನಿಗಾಗಿ ನಾನು ಮಾಡುತ್ತಿಲ್ಲ, ಈ ಸದನದ ಎಲ್ಲಾ ಸದಸ್ಯರ ಪರವಾಗಿ ಮಾತನಾಡುತ್ತಿದ್ದೇನೆ. ಆದರೆ ಸನ್ಮಾನ್ಯ ವೆಂಕಟರಾಮಯ್ಯನವರೇ ಒಂದಂ ದಾರಿ ನಾವೆಲ್ಲರೂ ಸರಿ ಎನ್ನುವುದನ್ನು ಅವರು ಅದು ಸರಿ ಇಲ್ಲ ಎನ್ನುತ್ತಾರೆ. ನಾನು ಯಾವುದೂ ಸಿನಿಮಾ ಇಟ್ಟಿಲ್ಲ. ಬಸ್‌ಗಳನ್ನು ಓಡಿಸುತ್ತಿಲ್ಲ, ಆದ್ದರಿಂದ ನನಗೆ ಅನುಕೂಲ ಬೇಕಾಗಿದೆ. ಆದ್ದರಿಂದ ಮಿಥ್ಯಾಚಾರಿಯಾಗಿ ವಾದ ಮಾಡುವುದು ಬೇಡ.

ಶ್ರೀ ಆರ್. ವೆಂಕಟರಾಮಯ್ಯ —ಅವರು ಇರುವುದು ಒಬ್ಬರೇ, ಏನು ಮಾಡೋದು. ಆದರೂ ವ್ಯಕ್ತಿಗತವಾಗಿ ನಾನು ಯಾವುದನ್ನೂ ಹೇಳಿಲ್ಲ.

ಶ್ರೀ ಪಂಪಾಪತಿ.—ಅವರ ತರಹ ವಾದ ಮಾಡಿದರೆ ನಮಗೂ ಅದು ಬರುತ್ತದೆ. ಜನರ ಪರವಾಗಿ ಮಾತನಾಡುವುದು ನಮ್ಮ ಜಬಾಬ್ದಾರಿ, ಕರ್ತವ್ಯ ಅಲ್ಲವೋ? ಅಲ್ಲವೆಂದರೆ ಹಾಗೆಂದು ಇಲ್ಲಿ ಹೇಳಿಬಿಟ್ಟು ತೆಗೆದುಕೊಳ್ಳಿ.

ಅಧ್ಯಕ್ಷರು —ಪ್ರಸ್ತಾವ ಏನೆಂದರೆ.

''೧೯೮೭ನೇ ಇಸವಿಯ ಕರ್ನಾಟಕ ವಿಧಾನಮಂಡಲದ ಸಂಬಳ, ನಿವೃತ್ತಿವೇತನ ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.''

ಪ್ರಸ್ತಾವವು ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡಗಳು–೨ ರಿಂದ ೧೫

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ.

''ಖಂಡಗಳಾದ ೨ ರಿಂದ ೧೫ಗಳು ಎರಡೂ ಸೇರಿದಂತೆ ವಿಧೇಯಕದ ಭಾಗಗಳಾದವು''

ಪ್ರಸ್ತಾವವು ಅಂಗೀಕರಿಸಲ್ಪಟ್ಟಿತು ಮತ್ತು ಖಂಡ ೨ ರಿಂದ ೧೫ರವರೆಗೆ ವಿಧೇಯಕಕ್ಕೆ ಸೇರಿಸಲ್ಪಟ್ಟವು

ಖಂಡ ೧ ಮತ್ತು ಇತರೆ

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ:

''ಖಂಡ ೧, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂಕ್ತ ಸಂಹಿತೆಗಳು ವಿಧೇಯಕದ ಭಾಗವಾಗಿರುತ್ತದೆ.''

ಪ್ರಸ್ತಾವವು ಅಂಗೀಕರಿಸಲ್ಪಟ್ಟಿತು ಮತ್ತು ಖಂಡ ೧ ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂಕ್ತ ಸಂಹಿತೆಗಳಲ್ಲಿ ವಿಧೇಯಕದ ಅಂಗವಾದವು

ಪ್ರಸ್ತಾವದ ಅಂಗೀಕಾರ

ಶ್ರೀ ಎ. ಲಕ್ಷ್ಮೀಸಾಗರ್ (ಸಂಸದೀಯ ವ್ಯವಹಾರಗಳ ಇಲಾಖೆ).—ಸ್ವಾಮಿ, ನಾನು ''೧೯೮೭ನೇ ಇಸವಿಯ ಕರ್ನಾಟಕ ವಿಧಾನ ಮಂಡಲದ ಸಂಬಳ, ನಿವೃತ್ತಿ ವೇತನ ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ''೧೯೮೭ನೇ ಇಸವಿಯ ಕರ್ನಾಟಕ ವಿಧಾನಮಂಡಲದ ಸಂಬಳ, ನಿವೃತ್ತಿ ವೇತನ ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು.''

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ವಿಧೇಯಕಕ್ಕೆ ಒಪ್ಪಿಗೆ ನೀಡಲಾಯಿತು.

೧೯೮೭ನೇ ಇಸವಿಯ ಕರ್ನಾಟಕ ಸಚಿವರುಗಳ ಸಂಬಳ ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ

ಶ್ರೀ ಎ. ಲಕ್ಷ್ಮೀಸಾಗರ್ (ಸಂಸದೀಯ ವ್ಯವಹಾರಗಳ ಸಚಿವರು).—ಸ್ವಾಮಿ, ೧೯೮೭ನೇ ಇಸವಿಯ ಕರ್ನಾಟಕ ಸಚಿವರುಗಳ ಸಂಬಳ ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೊರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು